# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 668 |
| ಸದಸ್ಯರ ಹೆಸರು | ಶ್ರೀಮತಿ ಭಾರತಿ ಶೆಟ್ಟಿ |
| ಉತ್ತರಿಸುವ ದಿನಾಂಕ | 12.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಮುಜರಾಯಿ ಇಲಾಖೆಯ ದೇವಸ್ಥಾನಗಳಿಗೆ ಸೇರಿದ ಭೂಮಿಯನ್ನು ಪರಭಾರೆ ಮಾಡಲು ಕಾರಣಗಳೇನು: ಇದರಿಂದ ಸಂಬಂಧಿಸಿದ ದೇವಸ್ಥಾನ ಗಳಿಗೆ ಯಾವ ರೀತಿಯಲ್ಲಿ ಉಪಯೋಗವಾಗಿದೆ; ದೇವಸ್ಥಾನದ 9825.91 ಎಕರೆ ಜಾಗವನ್ನು ಯಾವ ವರ್ಷದಲ್ಲಿ ಪರಭಾರೆ ಮಾಡಲಾಯಿತು ಮತ್ತು ಯಾರಿಗೆ ಪರಭಾರೆ ಮಾಡ ಲಾಯಿತು; (ವಿವರ ನೀಡುವುದು)</td><td>ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ದೇವಸ್ಥಾನಗಳ ಬಹುತೇಕ ಜಮೀನುಗಳನ್ನು ಈ ಕೆಳಕಂಡ ಕಾಯ್ದೆಗಳ ಅಡಿಯಲ್ಲಿ ಅಧಿಬೋಗದಾರಿಕೆ ಹಕ್ಕುಗಳನ್ನು ಭೂನ್ಯಾಯ ಮಂಡಳಿಗಳ ಮೂಲಕ ಮಂಜೂರು ಮಾಡಲಾಗಿರುವ ಕಾರಣಗಳಿಂದ ಪರಭಾರೆ ಆಗಿರುವುದು ಕಂಡು ಬಂದಿರುತ್ತದೆ.<br><br>a. ಮೈಸೂರು (ಧರ್ಮಾದಾಯ ಮತ್ತು ದತ್ತಿ) ಇನಾಂ ರದ್ಧತಿ ಕಾಯ್ದೆ 1955<br>b. ಕರ್ನಾಟಕ ವಿವಿಧ ಇನಾಂ (ರದ್ದಿಯಾತಿ) ಕಾಯ್ದೆ 1977<br>c. ಕರ್ನಾಟಕ ಸಂಡೂರು ಪ್ರದೇಶ ಇನಾಂ (ರದ್ದಿಯಾತಿ) ಕಾಯ್ದೆ 1976<br>d. ಕರ್ನಾಟಕ (ಬೆಳಗಾಂ ಮತ್ತು ಕಲಬುರಗಿ ಪ್ರದೇಶ) (ಧರ್ಮಾದಾಯ ಮತ್ತು ದತ್ತಿ) ಇನಾಂ ರದ್ಧತಿ ಕಾಯ್ದೆ 1973<br>e. ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961<br><br>ಸದರಿ ಕಾಯ್ದೆಗಳ ಅಡಿಯಲ್ಲಿ ಸಂಬಂಧಪಟ್ಟ ವಿವಿಧ ಭೂ-ನ್ಯಾಯಮಂಡಳಿಗಳ ಆದೇಶಗಳನ್ವಯ (ಅಧಿಬೋಗದಾರಿಕೆ ಹಕ್ಕಿನ ಮಂಜೂರಾತಿ) ಪರಭಾರೆಗಳಾಗಿರುತ್ತದೆ.<br><br>ಕೆಲವು ಜಮೀನುಗಳು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಕಲಂ 62 ಹಾಗೂ ನಿಯಮ 2002ರ ನಿಯಮ 28 ರಡಿಯಲ್ಲಿ ಮತ್ತು ಸದರಿ ಕಾಯ್ದೆ ಬರುವ ಪೂರ್ವದಲ್ಲಿದ್ದ ಸೆಕ್ಷನ್ 23 ರಡಿಯಲ್ಲಿನ ಉಪ ಕಲಂ (ಬಿ) (ಸಿ) (ಡಿ) (ಇ) ಮತ್ತು (ಎಫ್) ಕಾಯ್ದೆಗಳಡಿಯಲ್ಲಿಯೂ ಸಹ ಜಮೀನುಗಳನ್ನು ಪರಭಾರೆ ಮಾಡಬಹುದಾಗಿರುತ್ತದೆ.<br><br>ಮುಂದುವರೆದು, ಭೂಸ್ವಾಧೀನ ಕಾಯ್ದೆ 1891 ಹಾಗೂ ಭೂ ಅರ್ಜನೆಯಲ್ಲಿ ಯೋಗ್ಯ ಪರಿಹಾರ ಮತ್ತು ಪಾರದರ್ಶಕತೆ ಹಾಗೂ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗೆ ಅಧಿಕಾರ ಅಧಿನಿಯಮ, 2013ರ (ಕೇಂದ್ರ ಅಧಿನಿಯಮ ಸಂಖ್ಯೆ:30) ರಡಿಯಲ್ಲಿಯೂ ಸಹ ದೇವಾಲಯದ ಜಮೀನನ್ನು ಭೂಸ್ವಾಧೀನ, ಪರಭಾರೆಪಡಿಸಿಕೊಳ್ಳಲಾಗಿರುತ್ತದೆ. ಈ ರೀತಿ ಭೂ-ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಲ್ಲಿ ದೇವಾಲಯಗಳಿಗೆ ದಾನ ಮಾಡಿದ ಭೂಮಿಗಳು ಸಹ ಸೇರಿರುವುದಾಗಿರುತ್ತದೆ.<br><br>ಇನಾಂ ರದ್ದಿಯಾತಿ ಕಾಯ್ದೆ ಮತ್ತು ಭೂ ಸುಧಾರಣೆ ಕಾಯ್ದೆ ಅಡಿಯಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಇನಾಂ ಜಮೀನುಗಳು ಮತ್ತು ಇನಾಂಯೇತರ ಜಮೀನುಗಳು ಸರ್ಕಾರಕ್ಕೆ ನಿಹಿತವಾಗಿ ಭೂ ನ್ಯಾಯಮಂಡಳಿಗಳ ಮೂಲಕ ಪರಭಾರೆಯಾಗಿದ್ದು. ಈ ರೀತಿ ಇನಾಂ ಮತ್ತು ಇನಾಂಯೇತರ ಜಮೀನುಗಳನ್ನು ಕಳೆದುಕೊಂಡಿರುವ ಧಾರ್ಮಿಕ ಸಂಸ್ಥೆಗಳಿಗೆ ಪರಿಹಾರಾರ್ಥವಾಗಿ ತಸ್ತೀಕ್ ಮತ್ತು ವರ್ಷಾಸನ ಅನುದಾನವನ್ನು ಧಾರ್ಮಿಕ</td></tr>
</table>

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಸಂಸ್ಥೆಗಳು ಅಸ್ತಿತ್ವದಲ್ಲಿದ್ದು ಪ್ರತಿನಿತ್ಯ ಪೂಜಾ ಕೈಂಕರ್ಯಗಳು ನಡೆಯುತ್ತಿರುವುದನ್ನು ಖಾತರಿಪಡಿಸಿಕೊಂಡು ಪಾವತಿಸಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಅರ್ಹ ಧಾರ್ಮಿಕ ಸಂಸ್ಥೆಗಳು ತಸ್ತೀಕ್ ಮತ್ತು ವರ್ಷಾಸನ ಅನುದಾನ ಪಡೆಯುವುದಕ್ಕೆ ಉಪಯೋಗವಾಗಿರುತ್ತದೆ.<br><br>ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಸ್ಥಿರ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಹಾಗೂ ತಾಲ್ಲೂಕು ತಹಶೀಲ್ದಾರ್ ರವರೇ ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ. ಅಲ್ಲದೆ ಭೂ ನ್ಯಾಯ ಮಂಡಳಿಯ ಅಧ್ಯಕ್ಷರು ಸಂಬಂಧಪಟ್ಟ ಉಪವಿಭಾಗದ ಉಪವಿಭಾಗಾಧಿಕಾರಿ/ ಸಹಾಯಕ ಆಯುಕ್ತರು ಆಗಿದ್ದು, ಕಂದಾಯ ಇಲಾಖೆ ತಾಲ್ಲೂಕು ತಹಶೀಲ್ದಾರ್ ರವರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.<br><br>ಕರ್ನಾಟಕ ರಾಜ್ಯಪತ್ರ ಅಧಿಸೂಚನೆ ಸಂಖ್ಯೆ: ಸಂವ್ಯಶಾ 52 ಶಾಸನ 2021, ಬೆಂಗಳೂರು, ದಿನಾಂಕ:18.01.2022 ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದುದ್ದರಿಂದ ದೇವಾಲಯಕ್ಕೆ ಸೇರಿರುವ ಮತ್ತಷ್ಟು ಇನಾಂ ಜಮೀನುಗಳು ರೀಗ್ರ್ಯಾಂಟ್ ಆಗುವ ಸಾಧ್ಯತೆ ಇದೆ.</td></tr>
<tr><td>ಆ)</td><td>ಪರಭಾರೆ ಮಾಡಲಾದ 9825.91 ಎಕರೆ ಜಾಗವನ್ನು ಯಾರು ಯಾವ ದೇವಸ್ಥಾನಕ್ಕೆ ಯಾವ ಉದ್ದೇಶಕ್ಕಾಗಿ ನೀಡಲಾಗಿದೆ; ಇದರಲ್ಲಿ ದೇವಸ್ಥಾನ ಖರೀದಿಸಿದ ಜಾಗವೆಷ್ಟು; ದೇವಸ್ಥಾನಕ್ಕೆ ದಾನ, ಉಂಬಳಿ ಮೂಲಕ ದೊರೆತ ಜಾಗವೆಷ್ಟು; (ವಿವರ ನೀಡುವುದು)</td><td>ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನವು ಪರಭಾರೆ ಮಾಡಿರುವ ಜಾಗದ ವಿವರಗಳು ಪ್ರಸ್ತುತ ಲಭ್ಯವಿರುವ ಮಾಹಿತಿಯಂತೆ ಈ ಕೆಳಕಂಡಂತಿದೆ:-
<table>
<tr><th>ದೇವಾಲಯದ ಹೆಸರು</th><th>ಸರ್ವೆ ನಂ.</th><th>ವಿಸ್ತೀರ್ಣ</th><th>ಪರಭಾರೆ ಮಾಡಲಾದ ಸಂಸ್ಥೆ ಹೆಸರು</th><th>ಪರಭಾರೆ ಮಾಡಲಾದ ವರ್ಷ</th></tr>
<tr><td rowspan="6">ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ ದಕ್ಷಿಣ ಕನ್ನಡ ಜಿಲ್ಲೆ</td><td>61-6</td><td>0.10 ಎಕರೆ</td><td>ಮಹಿಳಾ ವಿವಿದೋದ್ದೇಶ ಸಹಕಾರ ಸಂಘ</td><td>1985-86</td></tr>
<tr><td>138-2</td><td>0.15 ಎಕರೆ</td><td>ದೂರವಾಣಿ ಇಲಾಖೆ</td><td>1996-97</td></tr>
<tr><td>61-3ಪಿ2</td><td>0.60 ಎಕರೆ</td><td rowspan="4">ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ</td><td rowspan="4">1996-97</td></tr>
<tr><td>61-4ಪಿ2</td><td>0.98 ಎಕರೆ</td></tr>
<tr><td>61-5ಪಿ2</td><td>0.16 ಎಕರೆ</td></tr>
<tr><td>83-1ಪಿ2</td><td>0.26 ಎಕರೆ</td></tr>
<tr><td>ಪೆರ್ಡೂರು ಶ್ರೀ ಅನಂತ ಪದ್ಮನಾಭ ದೇವಾಲಯಉಡುಪಿ ಜಿಲ್ಲೆ</td><td>317/2</td><td>3.70 ಎಕರೆ</td><td>ಕೆಮಿಕಲ್ ಕಾರ್ಖಾನೆ ಸ್ಥಾಪಿಸಲು ಮತ್ತು ಔಷಧಿ ಘಟಕ ಸ್ಥಾಪಿಸಲು</td><td>1975-76</td></tr>
</table></td></tr>
</table>

| ಪ್ರಶ್ನೆ | ಉತ್ತರ |
|---|---|

| | | | | |
|---|---|---|---|---|
| | 155/1ಎ1 | 4.02 ಎಕರೆ | ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ | 2004-05 |

ಲಭ್ಯ ಮಾಹಿತಿಯಂತೆ ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನದ ಉಪಯೋಗಕ್ಕಾಗಿ ಖರೀದಿ ಮಾಡಿರುವ ಜಾಗದ ವಿವರ ಈ ಕೆಳಕಂಡಂತೆ ಇದೆ

| **ದೇವಾಲಯದ ಹೆಸರು** | **ವಿಸ್ತೀರ್ಣ** | **ಖರೀದಿ ಮಾಡಲಾದ ಉದ್ದೇಶ** |
|---|---|---|
| ಮಂದಾರ್ತಿ ಶ್ರೀ ದುರ್ಗ ಪರಮೇಶ್ವರಿ ದೇವಾಲಯ ಉಡುಪಿ ಜಿಲ್ಲೆ | 0.12 ಎಕರೆ | ದೇವಾಲಯದ ಆಡಳಿತ ಕಛೇರಿ ನಿರ್ಮಾಣಕ್ಕೆ |
| | 0.56 ಎಕರೆ | ಭೋಜನ ಶಾಲೆ ನಿರ್ಮಾಣಕ್ಕೆ |

ಲಭ್ಯ ಮಾಹಿತಿಯಂತೆ ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನಕ್ಕೆ ದಾನವಾಗಿ ಬಂದಂತಹ ಜಮೀನಿನ ವಿವರಗಳು ಈ ಕೆಳಕಂಡಂತಿದೆ:-

| **ದೇವಾಲಯದ ಹೆಸರು** | **ಸಿ.ಟಿ.ಎಸ್ ನಂ/ಸರ್ವೆ ನಂಬರ್** | **ವಿಸ್ತೀರ್ಣ** |
|---|---|---|
| ಶ್ರೀ ರಾಯರಾಯ ಕಲ್ಯಾಣ ಮಂಟಪ ಕೆಆರ್. ರಸ್ತೆ ಬೆಂಗಳೂರು | ಸಿಟಿಎಸ್ ನಂ 44<br>ಎಲ್ಎ ನಂ 46 | 8902.3 ಚ ಮೀ |
| ಶ್ರೀ ಶ್ರೀನಿವಾಸ ಮಂದಿರ ಛಾರಿಟೀಸ್, ಬಳೇಪೇಟೆ ಬೆಂಗಳೂರು | ಖಾತೆ ಸಂಖ್ಯೆ 69-72,<br>73/1, 73/2<br>74-76 | 743.21 ಚ ಮೀ |
| ಶ್ರೀ ಚೌಬೀನಾ ಸುಬ್ಬರಾವ್ ಚಾರಿಟೀಸ್, ಚಾಮರಾಜ ಪೇಟೆ, ಬೆಂಗಳೂರು | ಸಿಟಿಎಸ್ ನಂ 1456 | 90*108 ಚ.ಅಡಿ |
| ಶ್ರೀ ದ್ವಾರಕ ಬಾಯಿ ವೇದಾತಂ ರವರು ಶ್ರೀರಂಗನಾಥಸ್ವಾಮಿ ದೇವಾಲಯ ಶ್ರೀರಂಗಪಟ್ಟಣ ಈ ದೇವಾಲಯದ ಹೆಸರಿಗೆ ದಾನವಾಗಿ ನೀಡಿರುವುದು | 1. ಪೆದ್ದನಪಾಳ್ಯ<br>2. ಬ್ಯಾಲಾಳು<br>3. ಚೋಳ<br>4. ನಾಯಕನಹಳ್ಳಿ<br>5. ದೊಡ್ಡಮಾರನಹಳ್ಳಿ<br>6. ಕಾಡುಕರೇನಹಳ್ಳಿ (ಕುರುಬರಹಳ್ಳಿ)<br>ಈ ಮೇಲ್ಕಂಡ 5 ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳ ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಿದೆ | 1198-34 ಎಕರೆ/ ಗುಂಟೆ (ಖರಾಬು ಸೇರಿ) ಚ.ಅಡಿ |
| ಶ್ರೀ ಬಂಡೀಶೇಷಮ್ಮ ಛತ್ರ ಕೆ.ಜಿ ವೃತ್ತ ಬೆಂಗಳೂರು | ಸಿಟಿಎಸ್ ನಂ.222 | 1667.3 ಚ.ಮೀ |

| ಪ್ರಶ್ನೆ | | ಉತ್ತರ |
|---|---|---|
| ಇ) | ದೇವಸ್ಥಾನಕ್ಕೆ ದಾನ ಉಂಬಳಿ ಮೂಲಕ ದೊರೆತ ಜಾಗವನ್ನು ಪರಭಾರೆ ಮಾಡುವ ಕುರಿತು ಇರುವ ನಿಯಮಗಳೇನು? (ಸದರಿ ನಿಯಮದ ಪ್ರತಿಯನ್ನು ಒದಗಿಸುವುದು) | ದೇವಸ್ಥಾನಕ್ಕೆ ದಾನ ಉಂಬಳಿ ಮೂಲಕ ದೊರೆತ ಜಾಗವನ್ನು ಪರಭಾರೆ ಮಾಡುವ ಕುರಿತು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಲಂ 62 ರನ್ವಯ ಅವಕಾಶ ಕಲ್ಪಿಸಲಾಗಿದೆ. ಕಾಯ್ದೆಯ ಪ್ರತಿಯನ್ನು **ಅನುಬಂಧ-2**ರಲ್ಲಿ ಒದಗಿಸಿದೆ. |

ಸಂಖ್ಯೆ: ಕಂಇ 67 ಮುಸಪ್ರ 2025

(ರಾಮಲಿಂಗಾರೆಡ್ಡಿ)
**ಸಾರಿಗೆ ಮತ್ತು ಮುಜರಾಯಿ ಸಚಿವರು**

ಅನುಬಂಧ-1

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 668-ಅ ಎ

ದಾನಪತ್ರದ ಸಂಖ್ಯೆ.1957/1938-39 ದಿ/15-4-1339 ವಾಲ್ಯೂಮ್-540

| ಕ್ರಮ ಸಂ | ಗ್ರಾಮ | ರೀ.ಸರ್ವೆ ನಂಬರ್ | ವಿಸ್ತೀರ್ಣ | | |
|---|---|---|---|---|---|
| | | | ಒಟ್ಟು | ಖುಷ್ಕಿ | ತರಿ |
| 1 | ಬ್ಯಾಲಾಳು | 47 | 31-00 | 31-00 | - |
| 2 | ಅದೇ | 51 | 45-00 | 45-00 | - |
| 3 | ಅದೇ | 53 | 19-00 | 19-00 | - |
| 4 | ಅದೇ | ಖರಾಬು | 100-00 | 100-00 | - |
| | ಗ್ರಾಮದ ಒಟ್ಟು ವಿಸ್ತೀರ್ಣ | | 195-00 | 195-00 | - |
| | ಚೋಳನಾಯಕನಹಳ್ಳಿ | 56 | 30-26 | 30-26 | |
| 1 | ಅದೇ | 57 | 33-12 | 33-10 | 0-02 |
| 2 | ಅದೇ | 58 | 23-33 | 23-30 | 0-03 |
| 3 | ಅದೇ | 59 | 109-25 | 109-25 | - |
| 4 | ಅದೇ | 60 | 6-00 | 6-00 | - |
| 5 | ಅದೇ | 61 | 27-00 | 27-00 | - |
| 6 | ಅದೇ | 62 | 27-00 | 27-00 | - |
| 7 | ಅದೇ | 63 | 29-33 | 29-33 | - |
| | ಗ್ರಾಮದ ಒಟ್ಟು ವಿಸ್ತೀರ್ಣ | | 287-09 | 287-04 | 0-05 |
| 1 | ದೊಡ್ಡಮಾರನಹಳ್ಳಿ | 28 | 24-00 | 24-00 | - |
| 2 | ಅದೇ | 29 | 21-00 | 21-00 | - |
| 3 | ಅದೇ | 30 | 24-36 | 24-36 | - |
| 4 | ಅದೇ | 32 | 19-00 | 19-00 | - |
| | ಗ್ರಾಮದ ಒಟ್ಟು ವಿಸ್ತೀರ್ಣ | | 88-36 | 88-36 | - |
| 1 | ಪೆದ್ದನಪಾಳ್ಯ | 7 | 18-25 | 18-25 | - |
| 2 | ಅದೇ | 8 | 67-13 | 67-13 | - |
| 3 | ಅದೇ | 9 | 70-23 | 70-23 | - |
| 4 | ಅದೇ | 10 | 50-39 | 50-39 | - |
| 5 | ಅದೇ | 11 | 59-06 | 59-06 | - |
| | ಗ್ರಾಮದ ಒಟ್ಟು ವಿಸ್ತೀರ್ಣ | | 266-26 | 266-26 | - |

ದಾನಪತ್ರದ ಸಂಖ್ಯೆ,1957/1938-39 ದಿ/15-4-1339 ವಾಲ್ಯೂಮ್-540

| ಕ್ರಮ ಸಂ | ಗ್ರಾಮ | ರೀ.ಸರ್ವೆ ನಂಬರ್ | ವಿಸ್ತೀರ್ಣ | | |
|---|---|---|---|---|---|
| | | | ಒಟ್ಟು | ಖುಷ್ಕಿ | ತರಿ |
| 1 | ಕಾಡುಕರೇನಹಳ್ಳಿ (ಕುರುಬರಹಳ್ಳಿ) | 117 | 2-00 | 2-00 | - |
| 2 | | 118 | 1-37 | - | 1-37 |
| 3 | ಅದೇ | 119 | 4-14 | 4-14 | - |
| 4 | ಅದೇ | 120 | 4-20 | 4-20 | - |
| 5 | ಅದೇ | 121 | 3-04 | 3-04 | - |
| 6 | ಅದೇ | 122 | 1-28 | - | 1-28 |
| 7 | ಅದೇ | 124 | 2-00 | - | 2-00 |
| 8 | ಅದೇ | 126 | 2-20 | - | 2-20 |
| 9 | ಅದೇ | 127 | 4-21 | 4-21 | - |
| 10 | ಅದೇ | 128 | 1-33 | 1-33 | - |
| 11 | ಅದೇ | 129 | 6-21 | 6-21 | - |
| 12 | ಅದೇ | 130 | 1-18 | 1-18 | - |
| 13 | ಅದೇ | 131 | 9-10 | 9-10 | - |
| 14 | ಅದೇ | 132 | 1-08 | 1-08 | - |
| 15 | ಅದೇ | 133 | 6-00 | 6-00 | - |
| 16 | ಅದೇ | 134 | 5-04 | 5-04 | - |
| 17 | ಅದೇ | 135 | 4-14 | 4-14 | - |
| 18 | ಅದೇ | 136 | 6-00 | 6-00 | - |
| 19 | ಅದೇ | 137 | 2-03 | - | 2-03 |
| 20 | ಅದೇ | 138 | 3-11 | 3-11 | |
| 21 | ಅದೇ | 139 | 6-18 | 6-18 | |
| 22 | ಅದೇ | 140 | 7-00 | 7-00 | |
| 23 | ಅದೇ | 142 | 3-17 | 0-34 | 2-23 |
| 24 | ಅದೇ | 143 | 3-00 | | 3-00 |
| 25 | ಅದೇ | 144 | 2-32 | 2-32 | |
| 26 | ಅದೇ | 146 | 5-35 | 5-35 | |
| 27 | ಅದೇ | 147 | 5-30 | 5-30 | |
| 28 | ಅದೇ | 148 | 2-35 | 2-19 | 0-16 |
| 29 | ಅದೇ | 149 | 1-39 | 0-32 | 1-07 |

ದಾನಪತ್ರದ ಸಂಖ್ಯೆ.1957/1938-39 ದಿ/15-4-1339 ವಾಲ್ಯೂಮ್-5

| ಕ್ರಮ ಸಂ | ಗ್ರಾಮ | ರೀ.ಸರ್ವೆ ನಂಬರ್ | ವಿಸ್ತೀರ್ಣ | | |
|---|---|---|---|---|---|
| | | | ಒಟ್ಟು | ಖುಷ್ಕಿ | ತರಿ |
| 30 | ಕಾಡುಕರೇನಹಳ್ಳಿ (ಕುರುಬರಹಳ್ಳಿ) | 152 | 5-03 | 5-03 | - |
| 31 | | 153 | 5-02 | 5-02 | - |
| 32 | ಅದೇ | 154 | 6-15 | 6-15 | - |
| 33 | ಅದೇ | 155 | 2-37 | 2-37 | - |
| 34 | ಅದೇ | 156 | 3-18 | 3-18 | - |
| 35 | ಅದೇ | 157 | 4-34 | 4-34 | - |
| 36 | ಅದೇ | 161 | 4-00 | 4-00 | - |
| 37 | ಅದೇ | 162 | 7-36 | 7-36 | - |
| 38 | ಅದೇ | 163 | 5-24 | 5-24 | - |
| 39 | ಅದೇ | 164 | 3-02 | 3-02 | - |
| 40 | | ಖರಾಬು | 200-00 | - | - |
| ಗ್ರಾಮದ ಒಟ್ಟು ವಿಸ್ತೀರ್ಣ | | | 361-03 | 143-29 | 17-14 |

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 668 ಅನುಬಂಧ - 2



(7) ಯಾವ ಅಧ್ಯಕ್ಷ, ವ್ಯವಸ್ಥಾಪಕ, ಅಥವಾ ಇತರ ವ್ಯಕ್ತಿಯಿಂದ ಅಕ್ರಮವ್ಯಯವನ್ನು ಭರ್ತಿ ಮಾಡುವ ಬಗ್ಗೆ ಮೊಬಲಗನ್ನು ವಸೂಲಿ ಮಾಡಬೇಕಾಗಿದೆಯೋ ಅಂಥ ಅಧ್ಯಕ್ಷ, ವ್ಯವಸ್ಥಾಪಕ ಅಥವಾ ಇತರ ವ್ಯಕ್ತಿಯು ಯಾವುದೇ ಸ್ವತ್ತು ಇರುವಂಥ ಜಿಲ್ಲೆಯ ಡೆಪ್ಯೂಟಿ ಕಮೀಷನರನು, ಸಹಾಯಕ ಆಯುಕ್ತನು ಮಾಡಿಕೊಂಡ ಕಡ್ಡಾಯ ಕೋರಿಕೆಯ ಮೇಲೆ ಅಂಥ ಮೊಬಲಗನ್ನು ಭೂ ಕಂದಾಯದ ಬಾಕಿ ಎಂಬಂತೆ ವಸೂಲು ಮಾಡತಕ್ಕದ್ದು ಮತ್ತು ಸಂಬಂಧಪಟ್ಟ ಅಧಿಸೂಚಿತ ಸಂಸ್ಥೆಗೆ ಅದನ್ನು ಸಂದಾಯ ಮಾಡತಕ್ಕದ್ದು.

(8) ಕಾರ್ಯನಿರ್ವಹಣಾಧಿಕಾರಿಯ ಮೇಲೆ ಅಕ್ರಮ ವ್ಯಯವನ್ನು ಭರ್ತಿ ಮಾಡುವುದಕ್ಕೆ ವಿಧಿಸಿದ್ದರೆ, ಪ್ರಾಧಿಕಾರವು ಆದೇಶಿಸಬಹುದಾದಂತೆ ಆತನಿಗೆ ಸಂದಾಯವಾಗತಕ್ಕ ಆತನ ವೇತನ ಮತ್ತು ಇತರ ಮೊಬಲಗುಗಳಿಂದ ಅದನ್ನು ವಸೂಲು ಮಾಡತಕ್ಕದ್ದು.

**61. ಅಧಿಸೂಚಿತ ಸಂಸ್ಥೆ ಅಥವಾ ಘೋಷಿತ ಸಂಸ್ಥೆಗೆ ಸೇರಿದ ಹಣವನ್ನು ತೊಡಗಿಸುವುದು / Investment of money belonging to a notified institution or declared institution.**- ಅಧಿಸೂಚಿತ ಸಂಸ್ಥೆ ಅಥವಾ ಘೋಷಿತ ಸಂಸ್ಥೆಗೆ ಸೇರಿದ ಮತ್ತು ತತ್‌ಕ್ಷಣ ಉಪಯೋಗಕ್ಕೆ ಅಗತ್ಯವಿಲ್ಲದ ಎಲ್ಲ ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಮಾತ್ರ ಅಥವಾ ರಾಜ್ಯ ಸರ್ಕಾರದ ಅನುಮತಿ ಪಡೆದು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದು ಬ್ಯಾಂಕಿಂಗ್ ಸಂಸ್ಥೆಯಲ್ಲಿ ಠೇವಣಿ ಇಡತಕ್ಕದ್ದು.

**62. ಸ್ಥಿರ ಸ್ವತ್ತಿನ ಪರಭಾರೆ / Alienation of immoveable property.**- (1) ಯಾವುದೇ ಅಧಿಸೂಚಿತ ಸಂಸ್ಥೆ ಅಥವಾ ಘೋಷಿತ ಸಂಸ್ಥೆಗೆ ಸೇರಿದ ಅಥವಾ ಕೊಟ್ಟ ಅಥವಾ ಅದರ ಉದ್ದೇಶಕ್ಕಾಗಿ ದತ್ತಿ ನೀಡಿದ ಯಾವುದೇ ಸ್ಥಿರ ಸ್ವತ್ತಿನ ಯಾವುದೇ ವಿನಿಮಯ, ದಾನ, ಮಾರಾಟ ಅಥವಾ ಅಡಮಾನ ಅಥವಾ ಗುತ್ತಿಗೆಯು, ಇದು ಸಂಸ್ಥೆಗೆ ಅಗತ್ಯವೆಂದು ಅಥವಾ ಲಾಭದಾಯಕವಾದುದೆಂದು ರಾಜ್ಯ ಸರ್ಕಾರವು ಇದಕ್ಕೆ ಮಂಜೂರಾತಿ ನೀಡಿದ ಹೊರತು, ಅಕೃತವಾಗತಕ್ಕದ್ದು ಮತ್ತು ಶೂನ್ಯವಾಗತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಿರ್ಬಂಧಗಳು ಅಥವಾ ಷರತ್ತುಗಳಿಗೆ ಒಳಪಟ್ಟು ಅಂಥ ಮಂಜೂರಾತಿಗಳನ್ನು ನೀಡತಕ್ಕದ್ದು.

ಪರಂತು, ಅಂಥ ಮಂಜೂರಾತಿಗೆ ಒಪ್ಪಿಗೆ ನೀಡುವುದಕ್ಕೆ ಮೊದಲು, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಉದ್ದೇಶಿತ ವ್ಯವಹಾರಕ್ಕೆ ಸಂಬಂಧಪಟ್ಟ ವಿವರಗಳನ್ನು, ನಿಯಮಿಸಬಹುದಾದಂಥ ವಿಧಾನದಲ್ಲಿ ಪ್ರಕಟಿಸತಕ್ಕದ್ದು ಮತ್ತು ಈ ಬಗ್ಗೆ ಪಡೆದುಕೊಂಡ ಎಲ್ಲ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಸೂಕ್ತವಾಗಿ ಪರಿಗಣಿಸತಕ್ಕದ್ದು.

(2) (1)ನೇ ಉಪ-ಪ್ರಕರಣದಡಿಯಲ್ಲಿನ ಅನುಮತಿಯನ್ನು ಮೋಸದಿಂದ ಅಥವಾ ತಪ್ಪು ನಿರೂಪಣೆಯಿಂದ ಪಡೆದುಕೊಂಡಿರುವುದು ತರುವಾಯ ಕಂಡುಬಂದಲ್ಲಿ ಸಂಬಂಧಪಟ್ಟ ಎಲ್ಲರಿಗೂ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ ಹಾಗೆ ನೀಡಲಾದ ಅನುಮತಿಯನ್ನು ರದ್ದುಗೊಳಿಸಲು ರಾಜ್ಯ ಸರ್ಕಾರವು ಸಕ್ಷಮವಾಗಿರತಕ್ಕದ್ದು.

(3) (1)ನೇ ಉಪ-ಪ್ರಕರಣದಡಿಯಲ್ಲಿ ಮಂಜೂರು ಮಾಡಲಾದ ಸ್ಥಿರಸ್ವತ್ತಿನ ಪ್ರತಿಯೊಂದು ಮಾರಾಟವನ್ನು, ನಿಯಮಿಸಲಾದ ವಿಧಾನದಲ್ಲಿ ಸಾರ್ವಜನಿಕ ಹರಾಜಿನ ಮೂಲಕ ಮತ್ತು ನಿಯಮಿಸಲಾಗುವ ಅವಧಿಯೊಳಗೆ ಆಯುಕ್ತನು ದೃಢೀಕರಿಸುವುದಕ್ಕೆ ಒಳಪಟ್ಟು ಮಾಡತಕ್ಕದ್ದು.





ಪರಂತು, ರಾಜ್ಯ ಸರ್ಕಾರವು ಅಧಿಸೂಚಿತ ಸಂಸ್ಥೆ ಅಥವಾ ಘೋಷಿತ ಸಂಸ್ಥೆಯ ಹಿತದೃಷ್ಟಿಯಿಂದ ಮತ್ತು ಕಾರಣಗಳನ್ನು ಬರಹದಲ್ಲಿ ದಾಖಲು ಮಾಡಿ, ಸಾರ್ವಜನಿಕ ಹರಾಜಿನ ಮೂಲಕವಲ್ಲದೆ ಇತರ ರೀತಿಯಲ್ಲಿ ಅಂಥ ಸ್ಥಿರ ಸ್ವತ್ತಿನ ಮಾರಾಟಕ್ಕೆ ಅನುಮತಿಯನ್ನು ನೀಡಬಹುದು.

(4) (1)ನೇ ಉಪ-ಪ್ರಕರಣದ ಅಡಿಯಲ್ಲಿ ಸ್ಥಿರ ಸ್ವತ್ತಿಗೆ ಸಂಬಂಧಪಟ್ಟ ಯಾವುದೇ ಸಿಂಧುವಲ್ಲದ, ಪರಭಾರೆ, ವರ್ಗಾವಣೆ ಅಥವಾ ಇತರ ಕ್ರಮವು ಸಹಾಯಕ ಆಯುಕ್ತನ ಗಮನಕ್ಕೆ ಬಂದರೆ ಆತನು, ತಾನು ಮಾಡುವುದು ಅವಶ್ಯವೆಂದು ಭಾವಿಸುವ ಅಂಥ ವಿಚಾರಣೆ ನಡೆಸಿದ ತರುವಾಯ, ಪರಭಾರೆ ಪಡೆದವನಿಗೆ ಅಥವಾ ಅದರ ಸ್ವಾಧೀನತೆಯನ್ನು ಹೊಂದಿರುವ ಪಕ್ಷಕಾರನಿಗೆ ನೋಟೀಸು ನೀಡಿ, ಹಾಗೆ ನೋಟೀಸು ನೀಡಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಅಂಥ ಭೂಮಿಯನ್ನು ಅದು ಯಾವ ಸಂಸ್ಥೆಗೆ ಸೇರಿದೆಯೋ ಆ ಸಂಸ್ಥೆಗೆ ಹಿಂದಿರುಗಿಸಬೇಕೆಂದು ತಿಳಿಸತಕ್ಕದ್ದು ಮತ್ತು ಅದನ್ನು ಪಾಲಿಸಲು ತಪ್ಪಿದಲ್ಲಿ ಸಹಾಯಕ ಆಯುಕ್ತನು ಅಂಥ ಭೂಮಿ ಅಥವಾ ಕಟ್ಟಡವನ್ನು, ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ರ ಉಪಬಂಧಗಳಿಗನುಸಾರವಾಗಿ ಪುನಃ ಸ್ವಾಧೀನಕ್ಕೆ ಪಡೆದುಕೊಂಡು ಸಂಸ್ಥೆಗೆ ಹಿಂತಿರುಗಿಸಲು ಕ್ರಮ ಕೈಗೊಳ್ಳತಕ್ಕದ್ದು.

## ಅಧ್ಯಾಯ - X / Chapter - X

## ಅಪೀಲು, ಪುನರೀಕ್ಷಣೆ ಮತ್ತು ಆದೇಶಗಳ ಜಾರಿ
## Appeal, revision and execution of orders

**63. [1][[2][ಕಮೀಷನರ್]]ನ ಪುನರೀಕ್ಷಣಾ ಅಧಿಕಾರಗಳು / Revisional powers of commissioner.**- (1) [1][[2][ಕಮೀಷನರ್]]ನು, ಸಹಾಯಕ ಆಯುಕ್ತ ಅಥವಾ ಉಪ ಆಯುಕ್ತ [3][ವ್ಯವಸ್ಥಾಪನಾ ಸಮಿತಿ ಅಥವಾ ಕಾರ್ಯನಿರ್ವಹಣಾಧಿಕಾರಿ] ಅಭಿಲೇಖಿಸಿದ ಅಥವಾ ಹೊರಡಿಸಿದ ನಿರ್ಣಯ ಅಥವಾ ಆದೇಶದ ಖಚಿತತೆಯ ಬಗ್ಗೆ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಸಹಾಯಕ ಆಯುಕ್ತ ಅಥವಾ ಉಪ ಆಯುಕ್ತ [3][ವ್ಯವಸ್ಥಾಪನಾ ಸಮಿತಿ ಅಥವಾ ಕಾರ್ಯನಿರ್ವಹಣಾಧಿಕಾರಿ] ಮುಂದಿರುವ ದಾಖಲೆಗಳು ಮತ್ತು ವ್ಯವಹರಣೆಗಳನ್ನು ತರಿಸಿಕೊಂಡು ಪರೀಕ್ಷಿಸಬಹುದು ಮತ್ತು ಸದರಿ ನಿರ್ಣಯ ಅಥವಾ ಆದೇಶವನ್ನು ರದ್ದುಗೊಳಿಸಬಹುದು, ವ್ಯತಿರಿಕ್ತಗೊಳಿಸಬಹುದು ಅಥವಾ ಮಾರ್ಪಡಿಸಬಹುದು ಅಥವಾ ಸ್ಥಿರೀಕರಿಸಬಹುದು ಅಥವಾ ಮತ್ತಷ್ಟು ವಿಚಾರಣೆ ನಡೆಸಲು ಅಥವಾ ತಾನು ಅಗತ್ಯವೆಂದು ಭಾವಿಸಬಹುದಾದಂಥ ಹೆಚ್ಚುವರಿ ಸಾಕ್ಷ್ಯವನ್ನು ಪಡೆಯಲು ಸಹಾಯಕ ಆಯುಕ್ತ ಅಥವಾ ಉಪ ಆಯುಕ್ತ [3][ವ್ಯವಸ್ಥಾಪನಾ ಸಮಿತಿ ಅಥವಾ ಕಾರ್ಯನಿರ್ವಹಣಾಧಿಕಾರಿ] ನಿರ್ದೇಶನ ನೀಡಬಹುದು ಅಥವಾ ತಾನೇ ಹೆಚ್ಚುವರಿ ಸಾಕ್ಷ್ಯವನ್ನು ಪಡೆಯಬಹುದು.

---

1. 2012ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 5-3-2012 ರಿಂದ ಪ್ರತ್ಯಾಯೋಜಿಸಲಾಗಿದೆ.
2. 2007ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 5-1-2007ರಿಂದ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ ಸಂಖ್ಯೆ 27ರ ಮೂಲಕ ದಿನಾಂಕ: 4-5-2011 ರಿಂದ ಪ್ರತ್ಯಾಯೋಜಿಸಲಾಗಿದೆ.